(ಸಾಕ್ಷಿಯನ್ನು ದಿನಾಂಕಃ 12.08.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. )

**<u>ಪಾಟೀ ಸವಾಲುಃ ವಾದಿ ಪರ ವಕೀಲರುಃ ಶ್ರೀ ಹೆಚ್ ಎಂ ರವರಿಂದ</u>**

ನಿ.ಡಿ. 1 ರ ದಾವೆಯನ್ನು ನನ್ನ ಮತ್ತು ನನ್ನ ಅಕ್ಕ ಮತ್ತು ನನ್ನ ತಾಯಿಯ ಜೀವನಾಂಶ ಮತ್ತು ವಿಭಾಗ ಕೋರಿ ಸಲ್ಲಿಸಲಾಗಿತ್ತು ಎಂದರೆ ಸರಿ. ಸದರೀ ದಾವೆಯನ್ನು ನಾವು ರಾಜೀ ಮಾಡಿಕೊಂಡಿದ್ದೆವು ಎಂದರೆ ಸರಿ. ಸದರೀ ದಾವೆಯ ಸಮಯದಲ್ಲಿ ನಾನು ಮತ್ತು ನನ್ನ ಅಕ್ಕ ವಯಸ್ಕರಾಗಿಲಿಲ್ಲ ಎಂದರೆ ಸ ರ. ಸದರೀ ದಾವೆಯಲ್ಲಿ ನಿಮ್ಮ ತಾಯಿ ನಿಮ್ಮ ಮತ್ತು ನಿಮ್ಮ ಅಕ್ಕನ ಪರವಾಗಿಯೂ ಸಹ ರಾಜೀ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರೀ ದಾವೆಯು ರಾಜಿ ನಂತರ ನಾನು, ನನ್ನ ಅಕ್ಕ ಮತ್ತು ನನ್ನ ತಾಯಿ ಹಾಗೂ ನನ್ನ ತಂದೆ ಒಟ್ಟಿಗೆ ವಾಸವಾಗಿದ್ದೆವು ಎಂದರೆ ಸರಿ. ನಿಮ್ಮ ತಂದೆ 2009 ರಲ್ಲಿ ಆರೋಗ್ಯ ತಪ್ಪಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 3 ರವರ ಮದುವೆ 2008 ರಲ್ಲಿ ಆಗಿರಬಹುದು. ನಿಮ್ಮ ತಂದೆಯ ಆರೋಗ್ಯ ಸರಿತಪ್ಪಿದ ನಂತರ 2 ನೇ ಪ್ರತಿವಾದಿಯು ಪ್ರತಿವಾದಿ 1 ಮತ್ತು 3 ಹೊಣೆಗಾರಿಕೆಯನ್ನು ಹಾಗೂ 3 ನೇ ಪ್ರತಿವಾದಿಯ ಮದುವೆಯ ಖರ್ಚುಗಳನ್ನು ನೋಡಿಕೊಂಡರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರೀ ಖರ್ಚುಗಳಿಗಾಗಿ 2 ನೇ ಪ್ರತಿವಾದಿ ಸಾಲವನ್ನು ಮಾಡಿದ್ದರು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯು ಕುಟುಂಬದಲ್ಲಿ ಇದ್ದ ಆದಾಯ ನನ್ನ ಮತ್ತು ಮೂರನೇ ಪ್ರತಿವಾದಿಯ ಹೊಣೆಗಾರಿಕೆ ಹಾಗೂ ನಮ್ಮ ತಂದೆಯ ಆರೋಗ್ಯದ ಖರ್ಚಿಗೆ ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 23.01.2010 ರಂದು ಹೆಚ್ ಡಿ ಪುಟ್ಟಸ್ವಾಮಿ ಎಂಬುವವರಿಗೆ ದಾವಾ ಸ್ವತ್ತು ಮತ್ತು ಇತರೇ ಸ್ವತ್ತುಗಳನ್ನು ಸದರೀ ಸಾಲದ ಹಣ ಹಾಗೂ ಇತರೇ ಖರ್ಚುಗಳಿಗಾಗಿ 2 ನೇ ಪ್ರತಿವಾದಿ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರೀ ಕ್ರಯದ ಆಧಾರದ ಮೇಲೆ ಹೆಚ್ ಡಿ ಪುಟ್ಟಸ್ವಾಮಿಯವರು ಸ್ವಾಧೀನಾನುಭವದಲ್ಲಿದ್ದರು ಎಂದರೆ ಸರಿಯಲ್ಲ. ಪುಟ್ಟಸ್ವಾಮಿಯವರ ಹೆಸರಿಗೆ ದಾವಾ ಸ್ವತ್ತಿನ ಕಂದಾಯ ದಾಖಲಾತಿಗಳು ಬದಲಾಗಿದ್ದವು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಮತ್ತು ಪ್ರಕರಣ ಬಾಕಿ ಇರುತ್ತದೆಯೆಂದು ನುಡಿಯುತ್ತಾರೆ. ದಿನಾಂಕಃ 17.11.2015 ರಂದು ವಾದಿಯು ಸದರೀ ದಾವಾ ಸ್ವತ್ತನ್ನು ಪುಟ್ಟಸ್ವಾಮಿಯವರಿಂದ

ಖರೀದಿ ಮಾಡಿದ್ದಾರೆಂದರೆ ಸರಿಯಲ್ಲ. ಸದರೀ ಕ್ರಯದ ಆಧಾರದ ಮೇಲೆ ಕಂದಾಯ ದಾಖಲಾತಿಗಳು ವಾದಿಯ ಹೆಸರಿಗೆ ಬಂದಿರುತ್ತವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಮತ್ತು ಪ್ರಕರಣ ನಡೆಯುತ್ತಿರುತ್ತದೆಯೆಂದು ನುಡಿಯುತ್ತಾರೆ.

ಅಸಲು ದಾವಾ 135/2016 ರಲ್ಲಿ ವಾದಿಗೆ ಆದ ಕ್ರಯಪತ್ರದ ನಂತರ ದಾವಾ ಸ್ವತ್ತುಗಳಲ್ಲಿ ಹಕ್ಕು ಘೋಷಣೆ ಕೋರಿ ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿ. ಸದರೀ ದಾವಾ ಹಾಲಿ ಬಾಕಿ ಇರುತ್ತವೆಯೆಂದರೆ ಸರಿ. ಸದರೀ ದಾವೆಯಲ್ಲಿ ಎರಡು ಮಧ್ಯಕಾಲೀನ ಅರ್ಜಿಗಳನ್ನು ಸ್ವಾಧೀನಕ್ಕೆ ತೊಂದರೆ ಕೊಡದಂತೆ ಹಾಗೂ ದಾವಾ ಸ್ವತ್ತನ್ನು ಮಾರಾಟ ಮಾಡದಂತೆ ಕೋರಿ ಸಲ್ಲಿಸಿದ್ದೆವು ಎಂದರೆ ಸರಿ. ಸದರೀ ದಾವೆಯಲ್ಲಿ ಈ ದಾವೆಯ ವಾದಿ ಸ್ವಾಧೀನಾನುಭವಕ್ಕೆ ತೊಂದರೆ ಕೊಡದಂತೆ ಸಲ್ಲಿಸಿದ್ದ ಮಧ್ಯಕಾಲೀನ ಅರ್ಜಿ ಹಾಗೂ ನಾನು ಸ್ವಾಧೀನಾನುಭವಕ್ಕೆ ತೊಂದರೆ ಕೊಡದಂತೆ ಸಲ್ಲಿಸಿದ್ದ ಮಧ್ಯಕಾಲೀನ ಅರ್ಜಿಗಳು ವಜಾ ಆಗಿದ್ದವು ಎಂದರೆ ಸರಿ. ಸದರೀ ದಾವೆಯಲ್ಲಿ ಈ ದಾವೆಯ ವಾದಿಗೆ ಬೇರೆ ದಾವೆ ಸಲ್ಲಿಸಬಹುದೆಂದು ಪರಾಮರ್ಶೆಯನ್ನು ಮಾಡಲಾಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರೀ ಅರ್ಜಿಯು ವಜಾ ಆದ ನಂತರ ಈ ದಾವೆಯನ್ನು ಹಾಕಲಾಗಿರುತ್ತದೆಯೆಂದರೆ ಸರಿ. ದಾವಾ ಸ್ವತ್ತಿನಲ್ಲಿ ವಾದಿಯು ಸ್ವಾಧೀನಾನುಭವದಲ್ಲಿದ್ದಾರೆಂದರೆ ಸರಿ. ಸದರೀಯವರು ಬೆಂಗಳೂರಿನ ವಾಸಿಯಾಗಿರುತ್ತಾರೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯು ದಾವಾ ಸ್ವತ್ತನ್ನು ನೋಡಿಕೊಳ್ಳಲು ಕೆಂಪೇಗೌಡ ಎಂಬುವವರಿಗೆ ಜಿ ಪಿ ಎ ಯನ್ನು ಕೊಟ್ಟಿರುತ್ತಾರೆಂದರೆ ಸಾಕ್ಷಿಯು ಮಾರಾಟ ಮಾಡಲು ಜಿ ಪಿ ಎ ಯನ್ನು ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಹಾಗಾಗಿ ಕೆಂಪೇಗೌಡರು ದಾವಾ ಸ್ವತ್ತಿನಲ್ಲಿ ಬೆಳೆಯನ್ನು ಬೆಳೆಯುತ್ತಿದ್ದಾರೆಂದರೆ ಸರಿಯಲ್ಲ. ನಿಮ್ಮ ಅಕ್ಕ ಜಯಲಕ್ಷ್ಮಮ್ಮ ವಿಭಾಗ ಕೋರಿ ಅಸಲು ದಾವೆಯನ್ನು 1 ನೇ ಅಪರ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆಂದರೆ ಸರಿ. ಕೆಂಪೇಗೌಡ ಎಂಬುವವರು ನನ್ನ ಅಕ್ಕನ ಗಂಡ ಆಗಿರುತ್ತಾರೆಂದು ನುಡಿಯುತ್ತಾರೆ. ಸದರೀ ದಾವೆಯ ಲಿಖಿತ ಹೇಳಿಕೆಯಲ್ಲಿ ಕುಟುಂಬದ ಖರ್ಚು ವೆಚ್ಚಕ್ಕಾಗಿ ದಾವಾ ಸ್ವತ್ತನ್ನು ಪುಟ್ಟಸ್ವಾಮಿಯವರಿಗೆ ಮಾರಾಟ ಮಾಡಿರುತ್ತಾರೆಂದು ನಮೂದು ಮಾಡಿಸಿರುತ್ತೇನೆಂದರೆ ಸರಿಯಲ್ಲ.

ಅಸಲು ದಾವಾ 135/2016 ತೀರ್ಮಾನವಾಗುವವರೆಗೂ ಈ ಕೇಸಿನ ವಾದಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನೀವು ತೊಂದರೆ ಕೊಡಬಾರದು ಎಂದು, ಸೂಚಿಸುವ

ಪ್ರಶ್ನೆಯು ನಿರ್ದೇಶನದಂತೆ ಇರುವ ಕಾರಣ ಸದರೀ ಪ್ರಶ್ನೆಯನ್ನು ತಿರಸ್ಕರಿಸಲಾಯಿತು. ಅಸಲು ದಾವಾ 135/2016 ರಲ್ಲಿ ವಾದಿ ಯು ಸಲ್ಲಿಸಿದ್ದ ಅರ್ಜಿಯು ವಜಾ ಆದ ನಂತರ ದಾವಾ ಸ್ವಾಧೀನಕ್ಕೆ ನೀವು ತೊಂದರೆ ಕೊಡಲು ಪ್ರಾರಂಭಿಸಿದ್ದೀರಿ ಎಂದರೆ ಸಾಕ್ಷಿಯು ಇಲ್ಲಾ ಎಂದು ನುಡಿದು ಮುಂದುವರೆದು, ಸ್ವಾಧೀನದಲ್ಲಿ ನಾವೇ ಇರುವ ಕಾರಣ ತೊಂದರೆ ಏನು ಬರುತ್ತದೆಯೆಂದು ನುಡಿಯುತ್ತಾರೆ. ಪುಟ್ಟಸ್ವಾಮಿಯವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ ನಂತರ ನಾವುಗಳು ಯಾವತ್ತಿಗೂ ಸಹ ಸ್ವಾಧೀನಾನುಭವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ರಾಜೀ ಅರ್ಜಿಯ ಪ್ರಕಾರ ದಾವಾ ಸ್ವತ್ತುಗಳಲ್ಲಿ ಯಾವುದೇ ಸಂಪೂರ್ಣವಾದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಎರಡನೇ ಪ್ರತಿವಾದಿಯು ದಾವಾ ಸ್ವತ್ತುಗಳಿಂದ ಬರುವ ಆದಾಯದಲ್ಲಿ ನನ್ನ ಮತ್ತು 3 ನೇ ಪ್ರತಿವಾದಿಯ ಜವಾಬ್ದಾರಿಯನ್ನು ನೋಡಿಕೊಳ್ಳುವುದು ಎಂದು ನಮೂದು ಮಾಡಲಾಗಿತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

ಪ್ರಧಾನ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ ಮದ್ದೂರು.